## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

**ಸಿ.ಸಿ. ಸಂಖ್ಯೆಃ 1735/2023**

**ಪಿರ್ಯಾದಿ** ಃ ರಾಜ್ಯ, ಪರವಾಗಿ ಬಾಳೂರು ಪೊಲೀಸ್ ಠಾಣೆ,
ಬಾಳೂರು.

### ವಿರುದ್ಧ

**ಆರೋಪಿತರು** ಃ1. ಚಂದ್ರೇಗೌಡ.ಟಿ.ಎಂ,
ಬಿನ್ ದಿಃ ಮಂಜೇಗೌಡ,
ವಯಸ್ಸು ಸುಮಾರು 35 ವರ್ಷ.

2. ಮಂಜೇಗೌಡ ಬಿನ್ ದಿಃ ಮಂಜೇಗೌಡ,
ವಯಸ್ಸು ಸುಮಾರು 47 ವರ್ಷ.

ಇಬ್ಬರ ವಾಸಃ ಎನ್.ತಿಮ್ಮನಹಳ್ಳಿ ಗ್ರಾಮ,
ಕಾರ್ಜುವಳ್ಳಿ ಅಂಚೆ, ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

3. ಚಂದ್ರಶೇಖರ.ಹೆಚ್.ಪಿ ಬಿನ್ ದಿಃ ಪುಟ್ಟಸ್ವಾಮಿಗೌಡ,
ವಯಸ್ಸು ಸುಮಾರು 28 ವರ್ಷ,
ವಾಸಃ ಹರಿಹರಪುರ, ಸಮುದ್ರಹಳ್ಳಿ ಗ್ರಾಮ,
ವಾಟೆವೊಳೆ ಅಂಚೆ, ಪಾಳ್ಯ ಹೋಬಳಿ,
ಆಲೂರು ತಾಲ್ಲೂಕು, ಹಾಸನ ಜಿಲ್ಲೆ.

### ದೋಷಾರೋಪಣೆ

ನಾನು ಶ್ರೀ ಸಚಿನ್.ಡಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆಗಳು ಏನೆಂದರೆಃ-

1. ದಿನಾಂಕ 10.07.2023 ರಂದು ರಾತ್ರಿ 12.45 ಗಂಟೆಯ ಸಮಯದಲ್ಲಿ 1 ರಿಂದ 3 ನೇ ಆರೋಪಿತರಾದ ನೀವುಗಳು ಬಾಳೂರು ಪೊಲೀಸ್ ಠಾಣಾ ವ್ಯಾಪ್ತಿಯ ಜಾವಳಿ ಗ್ರಾಮದ

ಬಸ್ ನಿಲ್ದಾಣದ ಬಳಿ ಅಂಚೆ ಕಛೇರಿ ಮುಂಭಾಗ ಹಾದುಹೋಗಿರುವ ಹೊರನಾಡು-ಬಾಳೂರು ಟಾರು ರಸ್ತೆಯ ಬದಿಯಲ್ಲಿ ಮಲಗಿರುವ ದನಗಳನ್ನು, ಹಾಸನದಲ್ಲಿ ಪ್ರತಿ ಮಂಗಳವಾರದಂದು ನಡೆಯುವ ದನಗಳ ಸಂತೆಯಲ್ಲಿ ಮಾರಾಟ ಮಾಡಿ ಹೆಚ್ಚಿನ ಹಣವನ್ನು ಮಾಡಬಹುದೆಂಬ ಉದ್ದೇಶದಿಂದ ಕಳ್ಳತನ ಮಾಡಿ ವಾಹನ ನೊಂದಣಿ ಸಂಖ್ಯೆಕೆಎ-13-ಸಿ-9634 ರ ಅಶೋಕ್ ಲೇಲ್ಯಾಂಡ್ ದೋಸ್ತ್ ಗೂಡ್ಸ್ ವಾಹನದಲ್ಲಿ ತುಂಬಿಕೊಂಡು ಬಂದಿರುತ್ತೀರಿ. ಈ ರೀತ್ಯಾ 1 ರಿಂದ 3 ನೇ ಆರೋಪಿತರಾದ ನೀವು ಭಾರತ ದಂಡ ಸಂಹಿತೆ ಕಲಂ 379 ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ಸದರಿ ದನಗಳನ್ನು ಮಾರಾಟ ಮಾಡಿ ಹೆಚ್ಚಿನ ಹಣವನ್ನು ಮಾಡಬಹುದೆಂದ ಉದ್ದೇಶದಿಂದ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ದನವನ್ನು ರಾತ್ರಿ ವೇಳೆಯಲ್ಲಿ ಕಳವು ಮಾಡಿ ವಾಹನ ನೊಂದಣಿ ಸಂಖ್ಯೆಕೆಎ-13-ಸಿ-9634 ರ ಅಶೋಕ್ ಲೇಲ್ಯಾಂಡ್ ದೋಸ್ತ್ ಗೂಡ್ಸ್ ವಾಹನದಲ್ಲಿ ತುಂಬಿಕೊಂಡು ಸಾಗಾಟ ಮಾಡಿರುತ್ತೀರಿ. ಈ ರೀತ್ಯಾ 1 ರಿಂದ 3 ನೇ ಆರೋಪಿಯಾದ ನೀವು ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಅಧಿನಿಯಮ 5 ಸಹಕಲಂ 12(3) ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವು 3 ನೇ ಆರೋಪಿಯಾದ ನಿಮ್ಮ ಮಾಲೀಕತ್ವದ ವಾಹನ ನೊಂದಣಿ ಸಂಖ್ಯೆಕೆಎ-13-ಸಿ-9634 ರ ಅಶೋಕ್ ಲೇಲ್ಯಾಂಡ್ ದೋಸ್ತ್ ಗೂಡ್ಸ್ ವಾಹನದಲ್ಲಿ ಯಾವುದೇ ಪರವಾನಗಿ ಇಲ್ಲದೇ ದನವನ್ನು ತುಂಬಿ ಸಾಗಾಟ ಮಾಡಿರುತ್ತೀರಿ. ಈ ರೀತ್ಯಾ 3 ನೇ ಆರೋಪಿಯಾದ ನೀವು ಮೋಟಾರು ವಾಹನ ಕಾಯಿದೆ ಕಲಂ 66 ಸಹವಾಚಕ ಕಲಂ 192 ಎ ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ?

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ.

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ? ಅವುಗಳು ನಿಮಗೆ ಅರ್ಥವಾಯಿತೇ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1 ನೇ ಆರೋಪಿಯ ಉತ್ತರಃ

2 ನೇ ಆರೋಪಿಯ ಉತ್ತರಃ

3 ನೇ ಆರೋಪಿಯ ಉತ್ತರಃ

(ದಿನಾಂಕ 09.01.2024 ರಂದು ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

Sd/-

ಮೂಡಿಗೆರೆ
ದಿನಾಂಕಃ 09.01.2024

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.